‘ಅಭಿಮಾನಿಗಳೇ ದೇವರು’ ಎಂದು ಕೈಮುಗಿದ, ಹಾಗೆ ಬಾಗುವುದರ ಮೂಲಕವೇ ತನ್ನ ಅಭಿಮಾನಿಗಳಿಗೂ ಬಾಗುವ ವಿನಯವನ್ನು ಕಲಿಸಿದ ರಾಜ್ ಅವರಿಂದ ಬಳೆ–ಕಡಗದ ಬಗ್ಗೆ ಮಾತನಾಡುವ ಸ್ಟಾರ್ ನಟರು ಏನನ್ನೂ ಕಲಿತಂತಿಲ್ಲ.

# ‘ಸ್ಟಾರ್’ಗಳೇ ಬಳೆ ತೊಟ್ಕೊಳ್ಳಿ, ತಪ್ಪೇನಿಲ್ಲ!



■ ಪದ್ಮನಾಭ ಭಟ್

‘ಒಂದೊಮ್ಮೆ ಮಾತುಗಳಿಂದಲೇ ಯುದ್ಧಗಳನ್ನು ಗೆಲ್ಲುವುದು ಸಾಧ್ಯವಿದ್ದಿದ್ದರೆ... ಇಂದು ಹಲವರು ರಾಜರಾಗಿರುತ್ತಿದ್ದರು. ನಾನು ಮನುಷ್ಯತ್ವದ ದಾರಿಯಲ್ಲಿ ಹೋಗಲು ಬಯಸುತ್ತೇನೆ’ – ನಟ ಸುದೀಪ್ ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಇದೇ ಅರ್ಥದ ಸಾಲುಗಳನ್ನು ಇತ್ತೀಚೆಗೆ ಹಂಚಿಕೊಂಡಿದ್ದಾರೆ. ಇಷ್ಟನ್ನೇ ಓದಿಕೊಂಡರೆ ಕನ್ನಡದ ಸ್ಟಾರ್ ನಟನೊಬ್ಬನ ಮನುಷ್ಯತ್ವದ ಪ್ರತಿಪಾದನೆಯ ಕುರಿತು ಯಾರಿಗಾದರೂ ಅಭಿಮಾನ ತುಂಬಿ ಬರುವುದು ಸುಳ್ಳಲ್ಲ. ಆದರೆ ಇವರದೇ ಟ್ವಿಟರ್ ಅಕೌಂಟನ್ನು ಇನ್ನೂ ಕೊಂಚ ಸ್ಕ್ರೋಲ್ ಮಾಡಿ ನೋಡಿದರೆ, ಸೂಕ್ಷ್ಮ ಸಂವೇದನೆ ಉಳ್ಳ ಯಾರಿಗಾದರೂ ಅಭಿಮಾನ ವಿಷಾದವಾಗಿ ಬದಲಾಗುತ್ತದೆ. ಇದಕ್ಕೆ ಟ್ವಿಟರ್ ಖಾತೆಗಳನ್ನೇ ನೋಡಬೇಕಿಲ್ಲ. ಕಳೆದ ಕೆಲವು ದಿನಗಳಿಂದ ಸೋಷಿಯಲ್ ಮೀಡಿಯಾದಲ್ಲಿ ನಡೆಯುತ್ತಿರುವ ‘ಸ್ಟಾರ್ ವಾರ್’ ಸದ್ದು ದಿನದಿನ ಪ್ರತಿಧ್ವನಿಸುತ್ತಲೇ ಇದೆ. ಈ ಅತಿರೇಕದ ಮತ್ತೊಂದು ಮಗ್ಗುಲಲ್ಲಿ ಇನ್ನೋರ್ವ ಸ್ಟಾರ್ ನಟ ದರ್ಶನ್ ಇದ್ದಾರೆ.

‘ಪೈಲ್ವಾನ್’ ಸಿನಿಮಾ ಪೈರಸಿಯಾದ ಪ್ರಕರಣ ಅಷ್ಟೇ ಬೇಗ ಸ್ಟಾರ್ ವಾರ್‌ಗೆ ತಿರುಗಿತು. ಹೀಗೆ ಇಬ್ಬರು ಜನಪ್ರಿಯ ನಟರ ಅಭಿಮಾನಿಗಳ ನಡುವೆ ಕಿಡಿ ಹೊತ್ತಿಕೊಳ್ಳುವುದು, ಅದು ಅತಿರೇಕಕ್ಕೆ ಹೋಗುವುದು ಕನ್ನಡ ಚಿತ್ರರಂಗಕ್ಕೆ ಹೊಸ ವಿಷಯವೇನಲ್ಲ. ಅದು ಲಾಗಾಯ್ತಿನಿಂದಲೂ ನಡೆದುಕೊಂಡೇ ಬಂದಿದೆ. ಆದರೆ ಅಭಿಮಾನಿಗಳ ನಡುವಿನ ಈ ಘರ್ಷಣೆಯನ್ನು ನಟರು ನಿರ್ವಹಿಸುತ್ತಿದ್ದ ರೀತಿ ಖಂಡಿತ ಹೀಗಿರಲಿಲ್ಲ. ಇರಬಾರದು ಕೂಡ.

ಸುದೀಪ್ ನಟನೆಯ ‘ಪೈಲ್ವಾನ್’ ಸಿನಿಮಾ ಪೈರಸಿ ಮಾಡಿದ್ದು ದರ್ಶನ್ ಅವರ ಅಭಿಮಾನಿ ಎಂಬ ಸುದ್ದಿ ಹಬ್ಬಿತು. ಮೊದಲಿನಿಂದಲೂ ಈ ಇಬ್ಬರೂ ನಟರ ನಡುವೆ ಇರುವ ವೈಮನಸ್ಸು ಅವರ ಅಭಿಮಾನಿಗಳ ನಡುವೆಯೂ ಉರಿ ಹಚ್ಚುತ್ತಲೇ ಬಂದಿತ್ತು. ಆ ಉರಿಗೆ ಈಗ ತುಪ್ಪ ಬಿದ್ದಂತಾಯ್ತು. ಸುದೀಪ್



# ಒಂಬತ್ತನೇ ದಿಕ್ಕಿಗೆ ಮುಖ ಮಾಡಿದ ದಯಾಳ್

ಬಿಗ್ ಬಾಸ್ ಮನೆಯಿಂದ ಹೊರಬಂದ ಮೇಲೆ ದಯಾಳ್ ಪದ್ಮನಾಭನ್ ಬದುಕಿನ ದೆಸೆಯೇ ಬದಲಾದಂತಿದೆ. ಒಂದರ ಹಿಂದೆ ಇನ್ನೊಂದು ಸಿನಿಮಾಗೆ ಬಿಡುವಿಲ್ಲದ ಹಾಗೆ ಆ್ಯಕ್ಷನ್ ಕಟ್ ಹೇಳುತ್ತಲೇ ಇದ್ದಾರೆ. ಈಗ ‘ರಂಗನಾಯಕಿ’ ಸಿನಿಮಾ ಪೂರ್ಣಗೊಳಿಸಿರುವ ದಯಾಳ್, ಆಗಲೇ ಯೋಗಿ ನಾಯಕನಾಗಿ ನಟಿಸಲಿರುವ ಇನ್ನೊಂದು ಚಿತ್ರದ ನಿರ್ದೇಶನ ಆರಂಭಿಸಿದ್ದಾರೆ. ಈ ಚಿತ್ರದ ಹೆಸರು ‘ಒಂಬತ್ತನೇ ದಿಕ್ಕು’. ಆ್ಯಕ್ಷನ್, ಕ್ರೈಂ ಮತ್ತು ಥ್ರಿಲ್ಲರ್ ಅಂಶಗಳನ್ನು ಬೆರೆಸಿ ರೂಪಿಸಿರುವ ಈ ಚಿತ್ರ ಪಕ್ಕಾ ಕಮರ್ಷಿಯಲ್ ಮಾದರಿಯಲ್ಲಿ